
## ನಾಂದಿಪದ

# ಮಾತುಕತೆ ಮತ್ತು ಕಥೆ

ಸಮಕಾಲೀನ ಕನ್ನಡ ಸಾಹಿತ್ಯದ ಗಮನಾರ್ಹ ಕಥೆ-ಕಾವ್ಯದ ಫಸಲನ್ನು ಒಳಗೊಳ್ಳುವುದರಲ್ಲಿ ಸದಾ ಮುಂಚೂಣಿಯಲ್ಲಿರುವ 'ಮಯೂರ', ಸಾಹಿತ್ಯ-ಸಂಸ್ಕೃತಿಯನ್ನು ಬದುಕಿನ ವಿಸ್ತಾರವಾದ ಪರಿಪ್ರೇಕ್ಷ್ಯದಲ್ಲಿ ನೋಡುತ್ತ ತನ್ನ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳಲು ನಿರಂತರ ಪ್ರಯತ್ನ ನಡೆಸುತ್ತಿದೆ. ಈ ನಿಟ್ಟಿನಲ್ಲಿ 'ಮಯೂರ'ದಲ್ಲಿ ಪ್ರಕಟಗೊಳ್ಳುತ್ತಿರುವ ಸಂದರ್ಶನಗಳು ಸಾಹಿತ್ಯದ ಮಾತುಕತೆಗಳಷ್ಟೇ ಆಗಿರದೆ, ಬದುಕನ್ನು ಆವರಿಸಿರುವ ವಿವಿಧ ಸಂಗತಿಗಳ ಕುರಿತ ಚರ್ಚೆಗಳೂ ಆಗಿವೆ. ಕನ್ನಡದ ಬರಹಗಾರರು, ಕಲಾವಿದರೊಂದಿಗೆ – ಸೋದರ ಭಾಷೆಗಳ ಬರಹಗಾರರನ್ನೂ ಕನ್ನಡದ ಓದುಗರಿಗೆ ಪರಿಚಯಿಸುವ ಸಂದರ್ಶನಗಳನ್ನು ಇತ್ತೀಚಿನ ಸಂಚಿಕೆಗಳಲ್ಲಿ ಗಮನಿಸಬಹುದು. ಈ ಸಂದರ್ಶನ ಬರಹಗಳು, ಕನ್ನಡದ ಸುತ್ತಮುತ್ತ ರೂಪುಗೊಳ್ಳುತ್ತಿರುವ ಸಾಹಿತ್ಯಲೋಕಗಳ ಚಹರೆಗಳನ್ನು ಅರ್ಥ ಮಾಡಿಕೊಳ್ಳಲು ನೆರವಾಗುವಂತಿವೆ ಹಾಗೂ ದೇಶದ ಅತ್ಯುತ್ತಮ ಸೃಜನಶೀಲ ಮನಸ್ಸುಗಳ ವ್ಯಕ್ತಿತ್ವ-ವಿಚಾರಗಳನ್ನು ಅರ್ಥ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಹಕಾರಿಯಾಗಿವೆ. ಸಾಹಿತ್ಯದ ವಿದ್ಯಾರ್ಥಿಗಳು ಮತ್ತು ಸಹೃದಯರಿಗೆ ರುಚಿಸಬಲ್ಲ ಮಾತುಕತೆಗಳ ಸಾಲಿಗೆ ಹೊಸ ಸೇರ್ಪಡೆ ಹಿಂದಿಯ ಪ್ರಮುಖ ಕವಿಗಳಲ್ಲೊಬ್ಬರಾದ ಅರುಣ್ ಕಮಲ್ ಅವರ ಸಂದರ್ಶನ. ಕಾವ್ಯದ ಸಾಧ್ಯತೆಗಳ ಬಗೆಗಿನ ಹೊಳಹುಗಳಲ್ಲದೆ, ಪರಿಸರದ ಕಾಳಜಿಯೂ ಈ ಮಾತುಕತೆಯ ಭಾಗವಾಗಿರುವುದು ಕವಿ-ಕಾವ್ಯದ ಕೇಂದ್ರದಲ್ಲಿರುವ ಸಾಮಾಜಿಕ ಕಾಳಜಿಯನ್ನು ಧ್ವನಿಸುವಂತಿದೆ.

ಕೃಷ್ಣಮೂರ್ತಿ ಹನೂರು ಅವರು ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟ ಅನುಭವ ಕಥನ ಈ ಸಂಚಿಕೆಯ ಆಕರ್ಷಣೆಗಳಲ್ಲೊಂದು. ಹಾರ್ವರ್ಡ್ ಅಂಗಳದಲ್ಲಿ ನಿಂತ ಹನೂರರು, ರಾಘವಾಂಕ, ಕುಮಾರವ್ಯಾಸರನ್ನು ನೆನಪಿಸಿಕೊಂಡಿದ್ದಾರೆ. ಹರಿಶ್ಚಂದ್ರ ಕಾವ್ಯದ ಮೂಲಕ ರಾಘವಾಂಕ ಸಾರಿದ ಘನವಾದ ಸತ್ಯ ವಿಶ್ವದ ಬೇರೆ ಯಾವ ಕಾವ್ಯದಲ್ಲೂ ಇದ್ದಿರಲಾರದು ಎಂದು ಆ ಕ್ಷಣ ಅವರಿಗನ್ನಿಸಿದ ಸಂಗತಿ ಕೇವಲ ಭಾವುಕ ವಿಚಾರವಾಗಿರದೆ, ಕನ್ನಡ ಸಾಹಿತ್ಯದ ಅನನ್ಯತೆಯನ್ನು ಸೂಚಿಸುವ ಮಾತಾಗಿದೆ.

ಸ. ರಘುನಾಥರು ತೆಲುಗಿನಿಂದ ಕನ್ನಡಕ್ಕೆ ತಂದಿರುವ 'ಚಂಡಮಾರುತ' ಕಥೆ ವಿಶಿಷ್ಟವಾದುದು. ಏಕಕಾಲಕ್ಕೆ ಪ್ರಕೃತಿಯಲ್ಲೂ ಮನುಷ್ಯನ ಅಂತರಂಗದಲ್ಲೂ ಸಂಭವಿಸುವ 'ಚಂಡಮಾರುತ' ಓದುಗರ ನೆನಪಿನಲ್ಲಿ ದೀರ್ಘ ಕಾಲ ಅನುರಣಿಸುವಷ್ಟು ಶಕ್ತಿಯುತವಾದುದು.


ಕಲೆ: ನಂಜುಂಡಸ್ವಾಮಿ

ಮಯೂರ ಬಳಗ
editormy@mayura.co.in